ವಿ. ವೆಂಕಟಾಚಲ, ಬೆಂಗಳೂರು

*ಶಾಲೆ, ಕಾಲೇಜುಗಳಲ್ಲಿ ಹಾಜರಾತಿ ಕಡಿಮೆ ಇದ್ದರೆ ವಿದ್ಯಾರ್ಥಿಗಳು ಅನರ್ಹರು. ವಿಧಾನಸಭಾಧಿವೇಶನದಲ್ಲಿ ಸಚಿವರ ಹಾಜರಾತಿ ಕಡಿಮೆ ಇದ್ದರೆ?*



ಹಾ–ಹಾಳು ಜ–ಜಗಳಗಳಲ್ಲಿ ರಾ–ರಾಷ್ಟ್ರವೆಲ್ಲಾ ತಿ–ತಿರುಗಾಟ ಆದ್ದರಿಂದ ಹಾಜರಾತಿ ಕಡಿಮೆಯಂತೆ, ಪಾಪ!

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.

*ದುರ್ಯೋಧನ ಎಷ್ಟೇ ದುಷ್ಟನಾಗಿದ್ದರೂ ಸಿಂಹಾಸನದಲ್ಲಿ ಕೂರದೆ ಅಂಧ ತಂದೆಯನ್ನು ಕೂರಿಸಿದ್ದ ಬಗ್ಗೆ ತಮ್ಮ ಅಭಿಪ್ರಾಯವೇನು?*

ಅದೇ ಭಾರತದ ಮೊಟ್ಟಮೊದಲ ಪ್ರಜಾಪ್ರಭುತ್ವದ ರಾಜ್ಯ; ದುರ್ಯೋಧನ ಹೈಕಮಾಂಡ್, ಅಂಧ ತಂದೆ ಪ್ರಧಾನಿ!

ಡೈರಿ ವಿಶ್ವನಾಥ್, ಬೆಂಗಳೂರು

*ಮೈಲಿಗೆ ಎಂದರೆ?*

ಟೆಂಪೊರರಿ ಅಸ್ಪೃಶ್ಯತೆ.

ಶ್ರೀಮತಿ ಸುನಂದಮ್ಮ, ಗೌರಿಬಿದನೂರು

ಗಂಡುಮಕ್ಕಳಿಗೆ ಬೀಡಿ, ಸಿಗರೇಟು, ಗುಟ್ಕಾ, ಬಿಯರ್, ವಿಸ್ಕಿ ಇತ್ಯಾದಿ ಚಟಗಳಿರುವಂತೆ ಹೆಣ್ಣು ಮಕ್ಕಳಿಗೆ ಯಾವ ಚಟಗಳಿರುತ್ತವೆ?



ಎಲ್ಲವನ್ನೂ ಮೀರಿಸುವ ಒಂದೇ ಚಟ – ಸೀರಿಯಲ್ ನೋಡುವುದು!

ಹಾಡ್ಯ ಬಿ. ಜಯಾನಂದ, ಮೈಸೂರು

*ಹಲ್ಲಿಡಿದು ಮಾತಾಡು ಅಂತಿರ್ತಾರೆ. ಹಲ್ಲಿಗೂ, ಮಾತಿಗೂ ಎತ್ತಣೆತ್ತಣ ಸಂಬಂಧವಯ್ಯಾ...?*

ವಯಸ್ಸಾದವರಿಗಂತೂ ಖಂಡಿತ ಇಲ್ಲ. ಕಟ್ಟಿಸಿದ ಹಲ್ಲನ್ನು ಕೈಯಲ್ಲೇ ಹಿಡಿದು ಭಾಷಣ ಮಾಡಬಲ್ಲರವರು!

ಶ್ವೇತಾಲಕ್ಷ್ಮಿ ಅಮ್ಮೈ, ಬೆಂಗಳೂರು

*ವಿದ್ಯೆಯಿಂದ ವಿನಯ ಪ್ರಾಪ್ತಿಯಾಗುತ್ತದೆ ಎನ್ನುತ್ತಾರೆ. ಆದರೆ ಕೆಲವರು ವಿದ್ಯಾವಂತರಾದರೂ ಅನಾಗರಿಕರಂತೆ ವರ್ತಿಸುತ್ತಾರಲ್ಲಾ...?*

ಅವರು ಪಡೆದುದು ದುರ್ವಿದ್ಯೆ. ದುರ್ವಿದ್ಯಾದದಾತಿ ದುರ್ವಿನಿಯಂ!

ಎಂ.ಎಸ್.ಧರ್ಮೇಂದ್ರ, ಜಿಟಿಆರ್‌ಇ ಕ್ಯಾಂಪಸ್

*ಚಂಡಮಾರುತದ ಹೆಸರುಗಳು ಬರೀ ಮಹಿಳಾಪ್ರಧಾನವಾಗಿರಲು ಕಾರಣವೇನು?*

ಉತ್ತರ ನಿಮ್ಮ ಮನೆಯಲ್ಲೇ ಇರುತ್ತದೆ. ಬೆಲ್ಲ ಜಜ್ಜಿದ ಕಲ್ಲಿನಂತೆ ಜಡವಾಗಿ ಕುಳಿತವನು ಗಂಡು, ಚುರುಕಾಗಿ ಚಲಿಸುವುದು ಹೆಣ್ಣು!

ಸೋಮಶೇಖರ್, ಎಲೆಮುದ್ದನಹಳ್ಳಿ

*ಭಾರತದಲ್ಲಿ 60ಕ್ಕೆ ಮುದುಕ ಎನ್ನುತ್ತಾರೆ, ವಿದೇಶಗಳಲ್ಲಿ 90ಕ್ಕೂ ಚಿರಯುವಕ ಎನ್ನುತ್ತಾರಲ್ಲಾ?*

ನೈಂಟಿ ಎಫೆಕ್ಟ್! ಕುಡಿದಾಗ ಹಾಗೆ ಮಾತನಾಡುವುದು ಸಹಜ!

ವಿಷ್ಣುಶಂಕರ್, ಶಿವಮೊಗ್ಗ

*ಇಲ್ಲೊಬ್ಬ ಸುಂದರಿ ನಾನು ದೇವಲೋಕದ ಕನ್ಯೆ ಅನ್ನುತ್ತಿರುತ್ತಾಳಲ್ಲಾ ಸಾರ್...?*

ಅವರದು ಒಟ್ಟುಕುಟುಂಬ; ದೇವಯ್ಯ, ಲೋಕೇಶ ಅವಳ ಸಹೋದರರು. ದೇವಲೋಕ ಅವರ ಮನೆಯ ಹೆಸರು!

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್

*ಎಲ್ಲದಕ್ಕೂ ಸಂಘಗಳಿರುವಾಗ ಪ್ರೇಮಿಗಳಿಗೇಕೆ ಸಂಘಗಳಿಲ್ಲ?*

ಪರಸ್ಪರ ಸಂಗಕ್ಕೇ ಸಮಯವಿಲ್ಲದಿರುವಾಗ ಸಂಘವೆಲ್ಲಿ ಸಾಧ್ಯ ಬಿಡಿ!

ಕಾಳೀಹುಂಡಿ ಶಿವಕುಮಾರ್, ಮೈಸೂರು

*ದಾಂಪತ್ಯ ಜೀವನದಲ್ಲಿ ಹೆಚ್ಚಾಗಿ ಬಿರುಕು ಮೂಡುತ್ತಿರಲು ಕಾರಣ?*

ಪರಸ್ಪರ ಅಪಥ್ಯ!

ಎಸ್.ಸಿ. ರಮೇಶ್, ಮೈಸೂರು

*ಮದಿರೆ ಮತ್ತು ಮಾನಿನಿ; ಈ ಎರಡರಲ್ಲಿ ಯಾವುದು ಹೆಚ್ಚು ಅಪಾಯಕಾರಿ ಗುರುವೆ?*

ಮದಿರೆಯೇ; ಮಾನಿನಿಯಿಂದ ಹೆಚ್ಚೆಂದರೆ ಚೊಂಬು. ಮದಿರೆಯಿಂದ ಚೊಂಬು!

ವಿ. ಹಮೀದ್, ವಿಟ್ಲ

*ಮುಟ್ಟಿದರೆ ಸ್ಪರ್ಶ, ತಬ್ಬಿದರೆ?*

ತಬ್ಬಿಬ್ಬು!

## ಬಹುಮಾನಿತ ಪ್ರಶ್ನೆ

ಎನ್.ಎಸ್. ಆನಂದ್, ಕತ್ತರಿಗುಪ್ಪ

*ಮಗನನ್ನು ಹೆತ್ತು ಸೊಸೆಗೆ ನೀಡುವುದಕ್ಕೂ, ಮಗಳನ್ನು ಹೆತ್ತು ಅಳಿಯನಿಗೆ ನೀಡುವುದಕ್ಕೂ ವ್ಯತ್ಯಾಸವೇನು ಸ್ವಾಮಿ?*

ಮೊದಲನೆಯದು ವಿಮೆ, ಎರಡನೆಯದು ಲಾಟರಿ!

ಲ್ಯಾಂಡ್ ಬ್ಯಾಂಕ್ ಡಿ.ಚಂದ್ರಕುಮಾರ್, ಬೆಂಗಳೂರು

*ಸಮಯವನ್ನು ಕಾಲಹರಣ ಮಾಡುವ ಮಂದಿಗೆ ನಿಮ್ಮ ಸಲಹೆ?*

ಕಳೆಯುತ್ತಿರುವುದು ಸಮಯವಲ್ಲ, ಆಯಸ್ಸು!

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಅಲ್ರಪ್ಪೋ. ವಿಸ್ಕಿ ಕುಡಿಯುವುದಕ್ಕೂ, ವಿಷ ಕುಡಿಯುವುದಕ್ಕೂ ಇರುವ ವ್ಯತ್ಯಾಸ?*

ಕೇವಲ ಆರೇ ಅಡಿ. ವಿಸ್ಕಿ ಕುಡಿದವನು ಭೂಮಿಯ ಮಟ್ಟದಲ್ಲಿರುತ್ತಾನೆ, ವಿಷ ಕುಡಿದವನು ಆರು ಅಡಿ ಕೆಳಗೆ!

ಆರ್. ಮಧುಸೂದನ್, ಹಾಸನ

*ನನ್ನ ಹೆಸರು ನಾರಾಯಣ. ಹೆಂಡತಿಯ ಹೆಸರು ಲಕ್ಷ್ಮಿ. ಕಾಲನ್ನು ಒತ್ತು ಎಂದರೆ ಕಾಲ್ಮುರೀತೀನಿ ಅಂತಾಳಲ್ಲಾ...?*



ಓಹ್! ಅಪ್ಪಿತಪ್ಪಿಯೂ ಕತ್ತುನೋವಿದೆ ಎಂದು ಹೇಳಿಗೀಳಿರಿ, ಹುಷಾರ್!

ಎಸ್. ಭಗವತಿ, ಗೊರೂರು

*ಸಾವನ್ನೇ ಗೆಲ್ಲೋ ಮಂತ್ರ ಇದೆಯಾ ಸಾರ್?*

ಇದೆಯಲ್ಲಾ, ಮೃತ್ಯುಂಜಯ ಮಂತ್ರ! ಆದರೆ ಮಂತ್ರಕ್ಕೆ ಸಾವಿನ ಬಾಯಿ ಮುಚ್ಚಲ್ಲ!

ಎಂ.ವಿ. ವೆಂಕಮ್ಮ, ಬಳ್ಳಾರಿ

*ನಿನ್ನೆ ಬೇರೆಯವರದು; ಇಂದು ನಿನ್ನದು; ನಾಳೆ ಇನ್ನೊಬ್ಬರದು; ಯಾವುದು ಸಾರ್?*

ಛತ್ರಿ!

ಡೈರಿ ವಿಶ್ವನಾಥ್, ಬೆಂಗಳೂರು

*ಸರ್ಪದ ವಿಷಕ್ಕಿಂತ ಕೆಟ್ಟದ್ದು ಇದೆಯೆ?*

ರಾಜಕಾರಣಿಯ ಮನ.

ರಾಮ್